# ವಿಲ್ ಹೆಲ್ಮ್ ಮ್ಯಾಕ್‌ಮಿಲಿಯನ್ ವುನ್ಡಟ್ (1832- 1920) ಮನೋವಿಜ್ಞಾನದ ಜನಕ

**ಇಂದಿರಾ ಜೈಪ್ರಕಾಶ್**



***

ಅಧ್ಯಯನದ ಒಂದು ವಿಷಯವನ್ನು ಹುಟ್ಟುಹಾಕಿದವರು ಇರುತ್ತಾರೆಯೇ? ವಿಜ್ಞಾನದ ಒಂದು ಕ್ಷೇತ್ರಕ್ಕೆ, ಒಬ್ಬ ವ್ಯಕ್ತಿಗೆ ಇರುವಂತೆ ಒಂದು ಜನ್ಮದಿನ ಇರುತ್ತದೆಯೇ? ಇಂತಹ ವಿಷಯಗಳು ವಿವಾದ ಹುಟ್ಟಿಸುವಂತಹುಗಳು. ನಿರಂತರವಾಗಿ ಹರಿಯುವ ವಿಚಾರಧಾರೆಯಲ್ಲಿ ಕೆಲವು ಘಟನೆಗಳು ಅಥವಾ ಕೆಲವು ವ್ಯಕ್ತಿಗಳ ಕೃತಿ, ಪ್ರಯೋಗ, ಉಪನ್ಯಾಸ ಇತ್ಯಾದಿಗಳು ಹೊಸ ಅಲೆಗಳನ್ನು ಹುಟ್ಟಿಸುತ್ತವೆ. ಇಂತಹ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಒಂದು ಪಂಥ, ನಿಯಮ, ಸಿದ್ಧಾಂತ ಹುಟ್ಟಿತು ಎಂದು ಸಾಧಾರಣವಾಗಿ ಹೇಳಲಾಗುತ್ತದೆ. ಅನೇಕ ಮನೋಭೌತಿಕ ವಿಜ್ಞಾನಿಗಳಿಂದ ಮಾನಸಿಕ ಪ್ರಕ್ರಿಯೆಗಳನ್ನು ಪ್ರಯೋಗಗಳಿಗೆ ಒಳಪಡಿಸಿ ಅಭ್ಯಸಿಸುವ ಪದ್ಧತಿ ಪ್ರಾರಂಭವಾಯಿತು. ಇವರಲ್ಲಿ ತನ್ನ ಸಾಧನೆಗಳಿಂದ ಮನಶ್ಯಾಸ್ತ್ರಕ್ಕೆ ನಿರ್ದಿಷ್ಟ ವೈಜ್ಞಾನಿಕ ತಿರುವು ನೀಡಿದವನು ವುನ್ಡಟ್.

'ಮನೋವಿಜ್ಞಾನದ ಜನಕ (Father of Psychology)' ಎಂದೇ ಪ್ರಸಿದ್ಧನಾದ ವುನ್ಡಟ್ ಜರ್ಮನಿಯ ವೈದ್ಯ ಮತ್ತು ಶರೀರಶಾಸ್ತ್ರಜ್ಞ (Physiologist). 1879ರಲ್ಲಿ ಲೆಪ್ಜಿಗ್ ವಿಶ್ವವಿದ್ಯಾಲಯದಲ್ಲಿ (Leipzig University) ಮೊದಲ ಪ್ರಯೋಗಶಾಲೆ ಸ್ಥಾಪಿಸಿ ಪ್ರಾಯೋಗಿಕ ಮನೋವಿಜ್ಞಾನ ಬೆಳೆಸಿದವನು. ಹೆಲ್ಮ್‌ಹೋಲ್ಜ್, ಫೆಕ್ನರ್ ಮುಂತಾದವರು ವೈಜ್ಞಾನಿಕ ಪ್ರಯೋಗಗಳನ್ನು ಇವನಿಗೂ ಮೊದಲೇ ಮಾಡಿದ್ದರು. ಅವರಿಗೂ ಈ ಕೀರ್ತಿ ಸಲ್ಲಬೇಕು ಎನ್ನುವವರಿದ್ದಾರೆ. ಆದರೆ ಮನಸ್ಸನ್ನು ಆಧ್ಯಯನಕ್ಕೆ ಒಳಪಡಿಸಲೆಂದೇ ಪ್ರಯೋಗಶಾಲೆ ಸ್ಥಾಪಿಸಿದವನು ವುನ್ಡಟ್. ಲೆಪ್ಜಿಗ್‌ನ ಪ್ರಯೋಗಶಾಲೆಯ ಸ್ಥಾಪನೆಯಿಂದ ಮನೋವಿಜ್ಞಾನ, ತತ್ವಶಾಸ್ತ್ರ ಮತ್ತು ಜೀವಶಾಸ್ತ್ರದಿಂದ ಬೇರ್ಪಟ್ಟು ಸ್ವತಂತ್ರ ಕ್ಷೇತ್ರವಾಗಿ ಬೆಳೆಯಲು ಸಾಧ್ಯವಾಯಿತು. ಹೈಡಲ್ಬರ್ಗ್ ನಲ್ಲಿ ಮನೋವಿಜ್ಞಾನದ ವ್ಯಾಸಂಗವನ್ನು ಪ್ರಥಮವಾಗಿ ಪ್ರಾರಂಭಿಸಿದವನು, ಶಾರೀರಿಕ ಮನೋವಿಜ್ಞಾನದ ಪ್ರಥಮ ಪುಸ್ತಕ ಬರೆದವನು, ತನ್ನನ್ನು ಮನೋವಿಜ್ಞಾನಿ ಎಂದು ಕರೆದುಕೊಂಡವನು, ಈ ಕ್ಷೇತ್ರದ ಸಂಶೋಧನೆಗೆ ಮೀಸಲಾದ ಮೊದಲ ವಿದ್ವತ್ ಪತ್ರಿಕೆ ಪ್ರಾರಂಭಿಸಿದವನು- ಹೀಗೆ ಇನ್ನೂ ಅನೇಕ 'ಪ್ರಥಮಗಳು' ವುನ್ಡಟ್ ನ ಹೆಸರಿಗೆ ಜೋಡಿಸಲ್ಪಟ್ಟಿವೆ.

ಜರ್ಮನಿಯ ಮನ್ನಹೈಮ್ನಲ್ಲಿ ಹುಟ್ಟಿದ್ದ ವುನ್ಡಟ್ ವೈದ್ಯಕೀಯ ಶಿಕ್ಷಣ ಪಡೆದು ಕೆಲಕಾಲ ಆ ವೃತ್ತಿಯಲ್ಲಿದ್ದ. ಅವನ ವೈದ್ಯವೃತ್ತಿ ಚೆನ್ನಾಗಿಯೇ ನಡೆಯುತ್ತಿತ್ತು. ಮುಲ್ಲರ್ ಎಂಬುವವನ ವಿಚಾರಗಳಿಂದ ಪ್ರಭಾವಿತನಾಗಿ ವೈದ್ಯಕೀಯ ಬಿಟ್ಟು ಶರೀರವಿಜ್ಞಾನದ ಅಧ್ಯಯನ ಪ್ರಾರಂಭಿಸಿದ. ಆ ಸಮಯದಲ್ಲಿ ಹೈಡಲ್ಬರ್ಗ್ ನಲ್ಲಿ ಶರೀರವಿಜ್ಞಾನದಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದ ಹರ್ಮನ್ ಹೆಲ್ಮ್ ಹೋಲ್ಜ್ ಬಳಿ ಸಹಾಯಕನಾಗಿ ಸೇರಿಕೊಂಡ. ವುನ್ಡಟ್ ಆ ಪ್ರಯೋಗಾಲಯದಲ್ಲಿದ್ದ ಉಪಕರಣಗಳನ್ನು ಬಳಸಿ ಮನಸ್ಸಿಗೆ ಸಂಬಂಧಿಸಿದ ವಿಷಯಗಳನ್ನು ಅಭ್ಯಸಿಸತೊಡಗಿದ. ಕೆಲಸಮಯ ಜ್ಯುರಿಕ್‌ನಲ್ಲಿ ಪ್ರಾಧ್ಯಾಪಕನಾಗಿದ್ದು ನಂತರ ಲೆಫ್ಜಿಗ್‌ಗೆ ಬಂದ. 1884ರಲ್ಲಿ ಮಾನವ ಮತ್ತು ಪ್ರಾಣಿಗಳ ಮನಸ್ಸು ಎಂಬ ಉಪನ್ಯಾಸಮಾಲೆ ಪ್ರಕಟಿಸಿದ. ಇವನ ಪ್ರಯೋಗಾಲಯ ಜರ್ಮನಿ ಮಾತ್ರವಲ್ಲದೆ ಬೇರೆ ದೇಶಗಳ ಬುದ್ಧಿಜೀವಿಗಳನ್ನು ಆಕರ್ಷಿಸತೊಡಗಿತು. ಅಮೆರಿಕೆಯಲ್ಲಿ ಹೆಸರು ಮಾಡಿದ ಸ್ಟೆನ್ಲಿ ಹಾಲ್, ಜೆ.ಎಂ. ಕೆಟೆಲ್, ಬ್ರಿಟನ್‌ನ ಎಡ್ವರ್ಡ್ ಟಿಟ್ಚನರ್ ಇವನ ಶಿಷ್ಯರಾದರು.

ಮುಂದೆ ಎಡ್ವರ್ಡ್ ಟಿಟ್ಚನರ್ ಸ್ಥಾಪಿಸಿದ 'ಸಂರಚನಾ' ಪಂಥದ ಮೂಲ ವಿಚಾರಗಳು ವುನ್ಡಟ್ ಕೆಲಸದಿಂದ ಹೊರಹೊಮ್ಮಿತ್ತು ಎನ್ನಲಾಗಿದೆ. ಆದರೆ ವಾಸ್ತವದಲ್ಲಿ ಸಂರಚನಾವಾದ ಮನಸ್ಸನ್ನು ಬಿಡಿ ಬಿಡಿ ಭಾಗಗಳನ್ನಾಗಿ ಅಭ್ಯಸಿಸಿದರೆ, ವುನ್ಡಟ್ ಮನಸ್ಸನ್ನು ಅಧ್ಯಯನ ಮಾಡುವ ವಿಧಾನ ಹೆಚ್ಚು ಸಮಗ್ರ ರೂಪದಲ್ಲಿರುತ್ತಿತ್ತು. ವುನ್ಡಟ್ ಮನೋವಿಜ್ಞಾನವನ್ನು ಚೇತನದ ಅನುಭವಗಳ ವೈಜ್ಞಾನಿಕ ಅಧ್ಯಯನ ಎಂದು ವ್ಯಾಖ್ಯೆ ಮಾಡಿ ಮನಸ್ಸಿನ ರಚನೆಯನ್ನು ಆಭ್ಯಸಿಸಲು 'ಅಂತರವಲೋಕನ' ಎಂಬ ವಿಧಾನ ಬಳಸಿದ. ಇದು ನುರಿತ ವೀಕ್ಷಕರು ತಮ್ಮ ಆಲೋಚನೆಗಳು, ಸಂವೇಗಗಳು ಮತ್ತು ಭಾವನೆಗಳನ್ನು ನಿಖರವಾಗಿ ಅವಲೋಕಿಸಿ ವಿವರಿಸುವ ವಿಧಾನ. ತನ್ನ ಪ್ರಯೋಗಗಳನ್ನು ಆಧರಿಸಿ ಇಂದ್ರಿಯ ಪ್ರತ್ಯಕ್ಷಣದ ಸಿದ್ಧಾಂತಗಳು ಎನ್ನುವ ಕೃತಿ ಹೊರತಂದ. ಇವನು ಪ್ರಯೋಗಾತ್ಮಕ ವಿಧಾನಗಳಿಗೆ ಒತ್ತು ನೀಡಿದ್ದು ಅದು ಮುಂದೆ ವರ್ತನಾವಾದಕ್ಕೆ ಅಡಿಪಾಯವಾಯಿತು ಎನ್ನಲಾಗಿದೆ.

ಇವನ ಪ್ರಯೋಗಾಲಯದಲ್ಲಿ ಮನೋಭೌತಿಕ ವಿಷಯಗಳು, ಸಂವೇದನೆ ಮತ್ತು ಪ್ರತ್ಯಕ್ಷಣ, ಪ್ರತಿಕ್ರಿಯಾ ಕಾಲ, ಸಾಹಚರ್ಯ ಮತ್ತು ಭಾವನೆಗಳನ್ನು ಪ್ರಯೋಗಕ್ಕೆ ಒಳಪಡಿಸಿ ಅನೇಕ ಸಂಶೋಧನೆಗಳಾದವು. ಇವನು ನಡೆಸಿದ್ದ ದೃಷ್ಟಿಭ್ರಮೆಯ ಪ್ರಯೋಗ ಇಂದಿಗೂ ಅವನ ಹೆಸರಿನಿಂದಲೇ ಕರೆಯಲ್ಪಡುತ್ತಿದೆ. 1920 ರಲ್ಲಿ ಸಾವನ್ನಪ್ಪುವವರೆಗೂ ವುನ್ಡಟ್ ತನ್ನ ಜೀವನದ ಬಹುಭಾಗವನ್ನು ಬರೆಯಲು ಮೀಸಲಾಗಿಟ್ಟಿದ್ದ. 68 ವರ್ಷಗಳ ವೈಜ್ಞಾನಿಕ ಚಟುವಟಿಕೆಯಲ್ಲಿ ಪ್ರಾಯೋಗಿಕ ಅಧ್ಯಯನ ಮಾತ್ರವಲ್ಲದೆ ಸಾಂಸ್ಕೃತಿಕ-ಸಾಮಾಜಿಕ ಅಧ್ಯಯನದ ವಿಷಯದಲ್ಲಿ ಹತ್ತು ಸಂಪುಟಗಳ ಕೃತಿ ರಚಿಸಿದ್ದ. ಲ್ಯಾಟಿನ್, ಗ್ರೀಕ್ ಮತ್ತು ಹಿಬ್ರೂ ಭಾಷೆಗಳಲ್ಲೂ ಇವನಿಗೆ ಪಾಂಡಿತ್ಯವಿತ್ತು. 1872ರಲ್ಲಿ ಸೋಫಿ ಮಾವ್ ಎಂಬುವವಳನ್ನು ವಿವಾಹವಾಗಿದ್ದು ಅವರಿಗೆ ಮೂವರು ಮಕ್ಕಳಿದ್ದರು. ಸೈಕೋಲಿಂಗ್ವಿಸ್ಟಿಕ್ಸ್(Psycholinguistic) ಎಂಬ ವಿಷಯದ ಅಧ್ಯಯನಕ್ಕೆ ಮತ್ತು ಬೇರೆ ದೇಶಗಳಲ್ಲಿ ಮನೋಪ್ರಯೋಗಾಲಯಗಳ (Laboratory of Experimental Psychology) ಸ್ಥಾಪನೆಗೆ ಇವನು ಪ್ರೇರಣೆಯಾದನು. ಮುಂದೆ ಮನೋವಿಜ್ಞಾನದಲ್ಲಿ ಕೆಲಸಮಾಡಿದ ಬಹಳಷ್ಟು ಮಂದಿ ಇವನ ಪ್ರಯೋಗಶಾಲೆಯಲ್ಲಿ ನುರಿತವರೇ ಆಗಿದ್ದರು.

***